ರಾಜ್ಯದಲ್ಲಿ ಗೃಹ ರಕ್ಷಕ ದಳದ ಸಂಖ್ಯೆ

2241 - ಶ್ರೀ ಡಿ.ಬಿ. ಚಂದ್ರೇಗೌಡ ತೀರ್ಥಹಳ್ಳಿ : ಮಾನ್ಯ ಬಂದೀಖಾನೆ ಮತ್ತು ಗೃಹ ರಕ್ಷಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಗೃಹ ರಕ್ಷಕ ದಳದ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ರಾಜ್ಯದ ಪೋಲೀಸ್ ಇಲಾಖೆಯವರಷ್ಟೇ ಸಮನಾದ ಸೇವೆಯನ್ನು ಸಲ್ಲಿಸುತ್ತಿರುವ ಗೃಹ ರಕ್ಷಕ ದಳದವರಿಗೆ ಪೋಲೀಸ್ ನೇಮಕಾತಿಯಲ್ಲಿ ಮೀಸಲಾತಿ ನೀಡುವಿರಾ?

ಇ) ಇಲ್ಲದಿದ್ದಲ್ಲಿ, ಮೀಸಲಾತಿ ನೀಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಡಿ.ಕೆ. ಶಿವಕುಮಾರ್ (ಬಂದೀಖಾನೆ ಮತ್ತು ಗೃಹರಕ್ಷಕದಳ ರಾಜ್ಯ ಸಚಿವರು)

ಅ) ರಾಜ್ಯಕ್ಕೆ ಮಂಜೂರಾಗಿರುವ 17,000 ಸಂಖ್ಯಾಬಲದೆದುರು 500 ಮಹಿಳಾ ರಕ್ಷಕರೂ ಸೇರಿದಂತೆ ಪ್ರಸ್ತುತ 16434 ಗೃಹ ರಕ್ಷಕರು ಇದ್ದಾರೆ. ಜಿಲ್ಲಾವಾರು ಮಾಹಿತಿಯನ್ನು ಈ ಕೆಳಗೆ ಕೊಡಲಾಗಿದೆ.

1. ಬೆಂಗಳೂರು	1829
2. ಬೆಳಗಾವಿ	1162
3. ಬಳ್ಳಾರಿ	600
4. ಬೀದರ್	600
5. ಬಿಜಾಪುರ	1000
6. ಚಿಕ್ಕಮಂಗಳೂರು	750
7. ಚಿತ್ರದುರ್ಗ	760
8. ಧಾರವಾಡ	1001
9. ದಕ್ಷಿಣ ಕನ್ನಡ	1000
10. ಗುಲ್ಬರ್ಗಾ	1000
11. ಹಾಸನ	1100
12. ಕೊಡಗು	500
13. ಕೋಲಾರ	444
14. ಕೆ.ಜಿ.ಎಫ್	599
15. ಮೈಸೂರು	1000
16. ಮಂಡ್ಯ	650
17. ರಾಯಚೂರು	400
18. ಶಿವಮೊಗ್ಗ	740
19. ತುಮಕೂರು	800
20. ಉತ್ತರ ಕನ್ನಡ	499

ಆ) ಗೃಹ ರಕ್ಷಕರು ಸ್ವಯಂಸೇವಕರಾಗಿದ್ದು, ತಮ್ಮದೇ ಆದ ಸ್ವಂತ ಉದ್ಯೋಗಗಳನ್ನು ಹೊಂದಿ ಬದುಕಿನ ವಿವಿಧ ರಂಗಗಳಿಂದ ಬಂದವರಾಗಿದ್ದಾರೆ. ಆದಾಗ್ಯೂ ಗೃಹ ರಕ್ಷಕ

ದಳದಲ್ಲಿ ಪಡೆದ ತರಬೇತಿಯು ಪ್ರಯೋಜನವಾಗುವಂತಹ ಗ್ರೂಪ್ 'ಸಿ' ಮತ್ತು 'ಡಿ' ಹುದ್ದೆಗಳ ನೇಮಕಾತಿಯಲ್ಲಿ ಗೃಹ ರಕ್ಷಕರಿಗೆ ಅದ್ಯತೆ ನೀಡುವ ಬಗ್ಗೆ ಸರ್ಕಾರವು ಅವಕಾಶವನ್ನು ಕಲ್ಪಿಸಿದೆ.

ಇ) ಇಲ್ಲಾ.

Development of Nagarabhavi second stage layout by the BDA

2124 - M.Narayana swamy, (Bethamangala) - will the chief minister be pleased to state

a) The number of sites allotted in Nagarphavi second stage by the BDA.

b) Whether it has come to the notice of the Government that the allottees are not able to construct houses due to lack of water supply, under-ground drainage and electricity and other facilities.

c) When will the BDA take action to provide water supply, underground, ekectricity and other facilities,

d) Inview of the above, will the BDA allow sufficient time to the allottees to construct their houses?

Shri. S. BANGARAPPA (Chief Minister) :

a) 3,674

b) Yes

c) B.W.S. & S.B., and K.E.B., will be requested to provide water supply and sanitary and Electric facilities expeditiously and this will be completed as early as possible.

d) yes.

ಕೋಲಾರ ಜಿಲ್ಲೆಯಲ್ಲಿರುವ ಪೋಲೀಸ್ ಠಾಣೆಗಳ ಸಂಖ್ಯೆ ಹಾಗೂ ಕಾರ್ಯ

2122 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯಲ್ಲಿ ಇರುವ ಪೋಲೀಸ್ ಠಾಣೆಗಳೆಷ್ಟು?

ಆ) ಅವು ಅಲ್ಲಿನ ಜನ ಸಂಖ್ಯೆಗನುಗುಣವಾಗಿವೆಯೇ?

ಇ) ಕೋಲಾರ ಜಿಲ್ಲೆಯಲ್ಲಿ 1991-92ರಲ್ಲಿ ತೆರೆಯಲಿರುವ ಹೊಸ ಪೋಲೀಸ್ ಠಾಣೆಗಳೆಷ್ಟು?

ಈ) ಈ ಜಿಲ್ಲೆಯಲ್ಲಿ ಕಳ್ಳತನ ಹಾಗೂ ದರೋಡೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರವು ಕೋಲಾರ ಜಿಲ್ಲೆಯಲ್ಲಿ ಹೆಚ್ಚು ಪೋಲೀಸ್ ಠಾಣೆಗಳನ್ನು ತೆರೆಯುವಲ್ಲಿ ಕ್ರಮ ತೆಗೆದುಕೊಳ್ಳುವುದೆ?

ಶ್ರೀ ಧರ್ಮಸಿಂಗ್ (ಗೃಹ ಸಚಿವರು) :

ಅ) 24

ಆ) ಹೌದು.

ಇ) ಒಂದು